<u>ದಿನಾಂಕಃ **08-11-2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಸ್ ಎ ವಕೀಲರಿಂದಃ</u>

**1.** ವಾದಿ, ಪ್ರತಿವಾದಿ 1 ರಿಂದ 4 ಹಾಗೂ 7 ನನ್ನ ಸಹೋದರರು ಎಂದರೆ ಸರಿ. 5 ನೇ ಪ್ರತಿವಾದಿ ನನಗೆ ಅಣ್ಣನಿದ್ದು ಅವರು ಈಗ ತೀರಿಕೊಂಡಿರುತ್ತಾರೆ. ಪ್ರತಿವಾದಿ 5 (ಎ) ಯಿಂದ (ಸಿ) ರವರು ನನ್ನ ಅಣ್ಣನ ವಾರಸುದಾರರು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಾವು ಸಹೋದರರು ದಿನಾಂಕ 08-5-2000 ರಂದು ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ . ಸದರಿ ವಿಭಾಗ ಪತ್ರದಲ್ಲಿ ನಮ್ಮ ತಾಯಿಯು ಸಹ ಒಬ್ಬ ಹಿಸ್ಸಾದಾರರು ಇದ್ದರು ಎಂದರೆ ಸರಿ. ಸದರಿ ವಿಭಾಗದಲ್ಲಿ ನಮ್ಮ ತಾಯಿಗೆ ಸರ್ವೆ ನಂಬರ್ 64 ರಲ್ಲಿ 1 ಎಕರೆ 2 ಗುಂಟೆ ಭಾಗಾಯ್ತು ಜಮೀನು ಹಾಗೂ ಕೊಪ್ಪ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿನ ಒಂದು ಹೆಂಚಿನ ಮನೆ ಹಾಗೂ ನಿವೇಶನವನ್ನು ಅವರಿಗೆ ಕೊಡಲಾಯಿತು. ನಮ್ಮ ತಾಯಿಗೆ ಬಂದ ಆಸ್ತಿಯಲ್ಲಿ 1 ನೇ ಮತ್ತು 4 ನೇ ಪ್ರತಿವಾದಿಯ ಜೊತೆ ನಮ್ಮ ತಾಯಿ ವಾಸ ಇದ್ದು ಅವರೇ ಜಮೀನನ್ನು ನೋಡಿಕೊಳ್ಳುತ್ತಿದ್ದರು. 1 ನೇ ಪ್ರತಿವಾದಿ ಬಾಳ್ತಾರ್ ಕರಿಮನೆ ಗ್ರಾಮದಲ್ಲಿ ವಾಸ ಇದ್ದರು. ದಿನಾಂಕ 25-07-2022 ರಂದು ನಮ್ಮ ತಾಯಿ ಮರಣ ಹೊಂದಿರುತ್ತಾರೆ. ನಮ್ಮ ತಾಯಿ ಮರಣ ಹೊಂದುವ ವರೆಗೂ ಅವರು ಮೂಲ ಮನೆಯಲ್ಲಿಯೇ ವಾಸ ಇದ್ದರು . ನಮ್ಮ ತಾಯಿ ಮರಣ ಹೊಂದವ ಪೂರ್ವದಲ್ಲಿ ತಮ್ಮ ಆಸ್ತಿಗೆ ಸಬಂಧ ಪಟ್ಟಂತೆ ಯಾವುದೇ ದಾಖಲೆಯನ್ನು ಯಾರ ಹೆಸರಿಗೂ ಮಾಡಿರುವುದಿಲ್ಲ.

**2.** ನಮ್ಮ ತಾಯಿ ಮರಣ ಹೊಂದುವ ಕಾಲಕ್ಕೆ ಅವರಿಗೆ 91 ವರ್ಷ ವಯಸ್ಸು ಆಗಿತ್ತು. ನಮ್ಮ ತಾಯಿಗೆ ಮರಣ ಹೊಂದುವ ಪೂರ್ವದಲ್ಲಿ 30 ವರ್ಷಗಳಿಂದ ಕಿವಿ ಕೇಳಿಸುತ್ತಿರಲಿಲ್ಲ ಹಾಗೂ 15 ವರ್ಷಗಳಿಂದ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಯಾವುದೇ ವ್ಯವಹಾರಿಕ ಜ್ಞಾನ ಇರಲಿಲ್ಲ. ನಮ್ಮ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಕಾಲಕಾಲಕ್ಕೆ ಮೂರನೇ ಪ್ರತಿವಾದಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ಅದೇ ರೀತಿ 5 ನೇ ಪ್ರತಿವಾದಿ ಮಂಗಳೂರಿನಲ್ಲಿ ಇದ್ದಾಗ ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿರುತ್ತಾರೆ. ನಾನು ನಮ್ಮ

ತಾಯಿಗೆ ಚಿಕಿತ್ಸೆ ಕೊಡಿಸಿರುತ್ತೇನೆ. ನಮ್ಮ ತಾಯಿ 1 ನೇ ಪ್ರತಿವಾದಿ ಹಾಗೂ 4 ನೇ ಪ್ರತಿವಾದಿಯ ಮನೆಯಲ್ಲೆ ಇರುತ್ತಿದ್ದು ಯಾವಾಗಾದರು ಒಮ್ಮೆ ಉಳಿದ ಮಕ್ಕಳ ಮನೆಗೆ ಹೋಗಿ ಬರುತ್ತಿದ್ದರು.

3. ಸಾಕ್ಷಿಗೆ 2 'ಬಿ' ಶೆಡ್ಯೂಲ್ ಗೆ ಸಂಬಂಧಿಸಿದ ತೆರಿಗೆ ಬೇಡಿಕೆ ಯ ದೃಢಿಕೃತ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ- 31 ಮತ್ತು 32 ಎಂದು ಗುರುತಿಸಲಾಯಿತು. ( ಪ್ರತಿವಾದಿ 4 ರ ಪರ ವಕೀಲರು ಸದರಿ ದಾಖಲೆಯನ್ನು ಗುರತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದರು ಸದರಿಯವರು ತಕರಾರನ್ನು ವಜಾಗೊಳಿಸಿ ಸದರಿ ದಾಖಲೆಯು ಸಾರ್ವಜನಿಕ ದಾಖಲೆ ಎಂದು ಹಾಗೂ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಸದರಿಯವರು ಆಕ್ಷೇಪಣೆಯನ್ನು ನಿರಾಕರಿಸಲಾಯಿತು.) ನನ್ನ ತಾಯಿ ಕರ್ನಾಟಕ ಬ್ಯಾಂಕ್ ನಾರ್ವೆ ಶಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಳವಿನಕೂಡಿಗೆ ಶಾಖೆಯಲ್ಲಿ ತಮ್ಮ ಖಾತೆಯನ್ನು ಹೊಂದಿದ್ದರು. ಬ್ಯಾಂಕಿನ ಖಾತೆಯನ್ನು ನಮ್ಮ ತಾಯಿ ನೋಡಿಕೊಳ್ಳುತ್ತಿರಲಿಲ್ಲ 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. ಸಾಕ್ಷಿಗೆ ತಮ್ಮ ತಾಯಿಯ ಕರ್ನಾಟಕ ಬ್ಯಾಂಕ್, ನಾರ್ವೆ ಶಾಖೆಯ ಅಕೌಂಟ್ ಎಕ್ಸಟ್ರಾಕ್ಟ್ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ಸದರಿ ಅಕೌಂಟ್ ತಮ್ಮ ತಾಯಿಗೆ ಸಂಬಂಧಿಸಿದ್ದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಪಿ- 33 ಎಂದು ಗುರುತಿಸಲಾಯಿತು. (ನಿಪಿ - 33 ಅನ್ನು ತಕರಾರಿಗೆ ಒಳಪಟ್ಟು ಗುರುತಿಸಲಾಗಿರುತ್ತದೆ). ನಿಪಿ- 33 ರಲ್ಲಿ ಏ.ಟಿ.ಎಂ ಕಾರ್ಡ್ ಅನ್ನು ಬಳಸಿ ಹಣವನ್ನು ವಿತ್ ಡ್ರಾ ಮಾಡಿರುತ್ತಾರೆ ಎಂದರೆ ಸರಿ. ಏ.ಟಿ.ಎಂ ಕಾರ್ಡ್ ಅನ್ನು ಪಡೆಯ ಬೇಕಾದರೆ ಅದಕ್ಕೆ ಒಬ್ಬರ ದೂರಾವಾಣಿ ಸಂಖ್ಯೆಯನ್ನು ನೀಡಬೇಕು ಎಂದರೆ ಸರಿ. ನಿಪಿ- 33 ರಲ್ಲಿ ನಮೂದಿಸಿದ ಮೊಬೈಲ್ ಸಂಖ್ಯೆ- 9686931037 ಇದು 4 ನೇ ಪ್ರತಿವಾದಿಗೆ ಸಂಬಂಧಿಸಿದ ದೂರವಾಣಿ ಸಂಖ್ಯೆ ಇರುತ್ತದೆ .

4. 4 ನೇ ಪ್ರತಿವಾದಿ ದಾವಾ ಸ್ವತ್ತು 'ಎ' ಗೆ ಸಂಬಂಧ ಪಟ್ಟಂತೆ ಕೃಷಿ ಸಾಲ ಪಡೆದುಕೊಂಡಿದ್ದರು ಎಂದರೆ ಸರಿ. ನಮ್ಮ ದಾವಾ 'ಬಿ' ಶೆಡ್ಯೂಲ್ ಗೆ ಸಂಬಂಧ ಪಟ್ಟಂತೆ ಯಾವುದೇ ದಾಖಲೆ ಮಾಡಿಕೊಂಡ ಬಗ್ಗೆ ನನಗೆ ಗೂತ್ತಿರುವುದಿಲ್ಲ. ನಮ್ಮ ತಾಯಿ ಜೀವಿತಾಧಿಯಲ್ಲಿ ತಾವು

ಮರಣ ಹೊಂದಿದ ನಂತರ ತಮ್ಮ ಪಾಲಿನ ಆಸ್ತಿಗಳು ಎಲ್ಲಾ ಮಕ್ಕಳಿಗೂ ಸೇರಬೇಕೆಂದು ಹೇಳುತ್ತಿದ್ದರು .

(ಪಾಟೀ ಸವಾಲುಃ ಪ್ರತಿವಾದಿ 4 ರ ಪರ ವಕೀಲರು ಸಮಯ ಕೋರಿದ್ದು , ಸಮಯ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ